ಬಿಜಾಪುರ ಜಿಲ್ಲೆಯಲ್ಲಿರುವ ಇರುವ ಜೈವಾನಿಲ ಸ್ಥಾವರಗಳ ಕಾರ್ಯ ನಿರ್ವಹಣೆ ಬಗ್ಗೆ

೧೦೫೫. ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ) ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮಂತ್ರಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಜೈವಾನಿಲ ಸ್ಥಾವರಗಳು ಕಾರ್ಯನಿರ್ವಹಿಸುತ್ತಿವೆ?

ಆ) ಇದಕ್ಕೆ ಸಂಬಂಧಿಸಿದಂತೆ ಸ್ಥಗಿತಗೊಂಡ ಅನಿಲಯಂತ್ರಗಳ ದುರಸ್ತಿಗೊಸ್ಕರ ತಾಂತ್ರಿಕ ಸಿಬ್ಬಂದಿ ಇದೆಯೇ ?

ಇ) ಸ್ಥಗಿತಗೊಂಡ ಅನಿಲಯಂತ್ರಗಳ ಮೇಲೆ ತೆಗೆದುಕೊಂಡ ಸಾಲವನ್ನು ರೈತರಿಗೆ ಮನ್ನಾ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ ?

ಈ) ಇಲ್ಲದಿದ್ದ ಪಕ್ಷದಲ್ಲಿ ಕಾರಣಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).

ಅ) ೧೯೮೭ನೇ ಜನವರಿ ಅಂತ್ಯದವರೆಗೆ ೧೪೫೮ ಸ್ಥಾವರಗಳನ್ನು ನಿರ್ಮಿಸಲಾಗಿದೆ.

ಆ) ಇಲ್ಲ

ಇ) ಇಲ್ಲ

ಈ) ಭಾರತ ಸರ್ಕಾರದವರು ವಿಶೇಷವಾದ ಧನಸಹಾಯವನ್ನು ಪ್ರತಿ ಸ್ಥಾವರಕ್ಕೆ ರೂ. ೧೫೦೦-೦೦ ರಿಂದ ರೂ. ೨೫೦೦-೦೦ಗಳವರೆಗೆ ಸ್ಥಾವರಗಳ ಗಾತ್ರಕ್ಕೆ ಅನುಗುಣವಾಗಿ ಸ್ಥಾವರಗಳನ್ನು ದುರಸ್ತಿಪಡಿಸಲು ಫಲಾನುಭವಿಗಳಿಗೆ ಅವಕಾಶಮಾಡಲಾಗಿದೆ. ಮತ್ತು ಈ ಸವಲತ್ತನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ.

೧೨-೦೦ ಪಿ.ಎಂ.

ಗಮನ ಸೆಳೆಯುವ ಸೂಚನೆ

''ರಸ್ತಾ ರೋಕೊ'' ಚಳವಳಿ ಮತ್ತು ಹುಬ್ಬಳ್ಳಿ-ಧಾರವಾಡ ಮೇಯರ್ ಮಂತ್ತು ಕಾರ್ಪೊರೇಟರುಗಳ ದಸ್ತಗಿರಿ

†ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರು ಮತ್ತು ನಾಗರೀಕರು ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ರಸ್ತೆ ರೋಕೋ ಚಳವಳಿ ನಡೆಸಿದ್ದರಿಂದ ಮೇಯರ್ ಮತ್ತು ಕಾರ್ಪೊರೇಟರ್‌ಗಳು ಸೇರಿ ಕೆಳ ಜನರನ್ನು ಬಂಧಿಸಿರುವ ಬಗ್ಗೆ ಮಾನ್ಯ ಕಾನೂನು ಮತ್ತು ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಸದರಿ ವಿಷಯದ ಬಗ್ಗೆ ನನ್ನ ಹೇಳಿಕೆ ಈರೀತಿ ಇದೆ.—

ಹುಬ್ಬಳ್ಳಿ-ಧಾರವಾಡ ನಗರದಲ್ಲಿಯ ನೀರು ಸರಬರಾಜು ಪರಿಸ್ಥಿತಿಯ ಬಗ್ಗೆ ದಿನಾಂಕ ೨೩-೧೦-೧೯೮೬ರಂದು ಮಾನ್ಯ ಮುಖ್ಯಮಂತ್ರಿಯವರು ಸಭೆ ನಡೆಸಿ ಪುನರಾವಲೋಕನ ಮಾಡಿದ್ದಾರೆ. ಈ ಸಭೆಯಲ್ಲಿ ಹುಬ್ಬಳ್ಳಿ-ಧಾರವಾಡ ನಗರ ಪಾಲಿಕೆಯ ಮೇಯರ್‌ರವರು ಮಹಾನಗರ ಪಾಲಿಕೆಯ ಅಧಿಕಾರಿಗಳೊಂದಿಗೆ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ

†ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.